

# ಏನಿದು ಮಂಪ್ಸ್?

ಮಂಪ್ಸ್ ಲಾಲಾರಸ ಗ್ರಂಥಿಯಲ್ಲಿ ಉಂಟಾಗುವ ವೈರಲ್ ಸೋಂಕು. ಇದು ಗ್ರಂಥಿಯನ್ನು ಉಬ್ಬಿಸಿ ದವಡೆಯು ಊದಿಕೊಳ್ಳುವಂತೆ ಮಾಡುತ್ತದೆ. ಜ್ವರ, ತಲೆನೋವು, ಊದಿಕೊಂಡ ಕೆನ್ನೆಗಳು, ಸ್ನಾಯು ನೋವು ಇತ್ಯಾದಿ ಇದರ ಲಕ್ಷಣಗಳು.

■ ಡಾ. ಕೆ.ಬಿ. ರಂಗಸ್ವಾಮಿ

ಕೆನ್ನೆಯ ಒಂದು ಬದಿ ಅಥವಾ ಎರಡೂ ಬದಿ ಊದಿಕೊಂಡು, ಅದಕ್ಕೆ ಗಂಧವನ್ನೋ ಯಾವುದೋ ಸೊಪ್ಪಿನ ರಸವನ್ನೋ ಲೇಪಿಸಿಕೊಂಡಿದ್ದ ಬಾಲ್ಯದ ನೆನಪು ನನ್ನ ವಯೋಮಾನದ ಕೆಲವರಿಗಾದರೂ ಇರುತ್ತದೆ. ಇದನ್ನು ಜನಸಾಮಾನ್ಯರು ಮಂಗನಬಾವು, ಗದ್ದಬಾವು, ಕೆನ್ನೆಬಾವು ಮುಂತಾದ ಸ್ಥಳೀಯ ಹೆಸರುಗಳಿಂದ ಕರೆಯುತ್ತಾರೆ. ಇದನ್ನೇ ‘ಮಂಪ್ಸ್’ ಎಂದು ಕರೆಯುವುದು.

ಇತ್ತೀಚೆಗೆ ನಮ್ಮ ವೈದ್ಯಕೀಯ ವಿಭಾಗದ ಇಬ್ಬರು ಸ್ನಾತಕೋತ್ತರ ವಿದ್ಯಾರ್ಥಿಗಳು ಮಂಪ್ಸ್‌ಗೆ ತುತ್ತಾಗಿದ್ದರು. ಕಳೆದ ಕೆಲವು ವರ್ಷಗಳಿಂದ ವಿರಳವಾಗಿಬಿಟ್ಟಿದ್ದ ಈ ಕಾಯಿಲೆ ಈಗೀಗ ಮತ್ತೆ ಕಾಣಿಸಿಕೊಳ್ಳತೊಡಗಿರುವುದು ಕಳವಳಕಾರಿ ಸಂಗತಿಯೇ ಸರಿ.

## ಮಂಪ್ಸ್‌ಗೆ ಕಾರಣವೇನು?

ಮಂಪ್ಸ್ ಎಂಬುದು ‘ಪ್ಯಾರಾಮಿಕ್ಸೋ ವಿರಿಡೇ’ ಎಂಬ ಪ್ರಭೇದಕ್ಕೆ ಸೇರಿದ ಒಂದು ವೈರಾಣುವಿನ ಸೋಂಕಾಗಿರುತ್ತದೆ. ಉಸಿರಾಟ ಮತ್ತು ಸೀನಿನ ಹನಿಗಳ ಮುಖಾಂತರ ಸೋಂಕಿತ ವ್ಯಕ್ತಿಗಳಿಂದ ಇತರರಿಗೆ ಹರಡುವ ಈ ಕಾಯಿಲೆ, ಕೆನ್ನೆ ಮತ್ತು ದವಡೆಯ ಭಾಗಗಳಲ್ಲಿರುವ ಪೆರೋಟಿಡ್, ಸಬ್ ಮ್ಯಾಂಡಿಬುಲಾರ್ ಮುಂತಾದ ಲಾಲಾಗ್ರಂಥಿಗಳ ಉರಿಯೂತಕ್ಕೆ ಕಾರಣವಾಗುತ್ತದೆ. ಹಾಗೆಯೇ ಈ ಕಾಯಿಲೆಗೆ ತುತ್ತಾದ ಮಕ್ಕಳು ಮತ್ತು ವಯಸ್ಕರಲ್ಲಿ ಅದರ ದುಷ್ಪರಿಣಾಮಗಳಿಂದ ಹಲವಾರು ಆರೋಗ್ಯ ಸಮಸ್ಯೆಗಳುಂಟಾಗಬಲ್ಲವು.

## ರೋಗ ಲಕ್ಷಣಗಳು

ಸಾಮಾನ್ಯವಾಗಿ ಇದು ಐದರಿಂದ ಹದಿನೈದು ವರ್ಷಗಳ ನಡುವಿನ ವಯೋಮಾನದ ಮಕ್ಕಳಲ್ಲಿ ಕಾಣಿಸಿಕೊಳ್ಳಬಹುದಾದ ಕಾಯಿಲೆಯಾಗಿದ್ದರೂ ವಯಸ್ಕರಲ್ಲಿಯೂ ಕಾಣಿಸಿಕೊಳ್ಳಬಹುದು. ತಾಯಿಯಿಂದ ಬಳುವಳಿಯಾಗಿ ಬಂದ ಪ್ರತಿಕಾಯಗಳು ಆರಂಭದ ಕೆಲ ತಿಂಗಳುಗಳ ಕಾಲ ಮಂಪ್ಸ್ ಸೋಂಕಿನ ವಿರುದ್ಧ ಶಿಶುವಿಗೆ ರಕ್ಷಣೆ ನೀಡುತ್ತವೆ.

ಸುಮಾರು ಎರಡರಿಂದ ನಾಲ್ಕು ವಾರಗಳವರೆಗಿನ ಅದಿಶಯನ ಕಾಲದ ನಂತರ ಮಂಪ್ಸ್‌ನ ರೋಗಲಕ್ಷಣಗಳು ಕಾಣಿಸಿಕೊಳ್ಳತೊಡಗುತ್ತವೆ. ವಿಪರೀತ ಜ್ವರ, ತಲೆನೋವು, ಸುಸ್ತು, ವಾಂತಿ ಮುಂತಾದ ಸಾಮಾನ್ಯ ರೋಗಲಕ್ಷಣಗಳ ಜೊತೆ ಜೊತೆಯಲ್ಲೇ ಕೆನ್ನೆಯ ಒಂದು ಬದಿ ಅಥವಾ ಎರಡೂ ಬದಿ ಬಾವು ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಗದ್ದದ ಭಾಗದಲ್ಲಿಯೂ ಬಾವು ಕಾಣಿಸಿಕೊಳ್ಳಬಹುದು. ಉರಿಯೂತಕ್ಕೊಳಗಾದ ಲಾಲಾಗ್ರಂಥಿಗಳು ಅಸಾಧ್ಯ ನೋವಿನಿಂದ ಕೂಡಿರುತ್ತವೆ. ಊದಿದ ಪೆರೋಟಿಡ್ ಗ್ರಂಥಿಯ ಮೇಲ್ಭಾಗದಲ್ಲಿರುವ ಕಿವಿಯ ಕೆಳತುದಿ ಕೊಂಚ ಮೇಲಕ್ಕೆಡರಿದಂತೆ ಗೋಚರಿಸುತ್ತದೆ. ಲಾಲಾರಸದ ಸ್ರವಿಕೆ ಕುಂಠಿತವಾಗುವುದರಿಂದ ಬಾಯಿಯಲ್ಲಿ ಶುಷ್ಕತೆ ಇರುತ್ತದೆ. ಕಿವಿನೋವು ಮತ್ತು ದವಡೆ ನೋವು ಕೂಡಾ ಇರಬಹುದು. ಒಮ್ಮೆ ಮಂಪ್ಸ್‌ಗೆ